**2 ನೇ ಆಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬಳ್ಳಾರಿ**

**ಸತ್ರ ಮೊಕದ್ದಮೆ ಸಂಖ್ಯೆ: 35/2022**

ಪಿ.ಡಬ್ಲು: **13** ಸಿಡಬ್ಲು:-**26**

| | | |
|---|---|---|
| ಸಾಕ್ಷಿಯ ಹೆಸರು | : | ಡಿ.ರಾಘವೇಂದ್ರ ನಾಯ್ಡು |
| ತಂದೆಯ ಹೆಸರು | : | ಲೇಟ್ ತಿಮ್ಮಪ್ಪ |
| ವಯಸ್ಸು | : | 37 ವರ್ಷ |
| ವೃತ್ತಿ | : | ವ್ಯವಸ್ಥಾಪಕರು, ಸೂರ್ಯ ಭವನ, ಬಳ್ಳಾರಿ |
| ವಾಸಸ್ಥಳ | : | ಬಳ್ಳಾರಿ |

**ಸತ್ಯ ಪ್ರತಿಜ್ಞೆ ಮಾಡಿದ ದಿನಾಂಕ: 25.09.2025.**

ಮುಖ್ಯ ವಿಚಾರಣೆ ಮಾನ್ಯ ಸಾರ್ವಜನಿಕ ಅಭಿಯೋಜಕರಿಂದ:-

**1)** ಸೂರ್ಯಭವನ ಫಂಕ್ಷನ್ ಹಾಲ್ ಬಳ್ಳಾರಿ ಇದು ಅನಂತಪುರ ರಸ್ತೆಯಲ್ಲಿ ಇದೆ. ನಾನು ಅದರ ವ್ಯವಸ್ಥಾಪಕ ಎಂದು ಕಳೆದ 7 ವರ್ಷಗಳಿಂದ ಕಾರ್ಯ ನಿರ್ವಹಿಸುತ್ತಿದ್ದೇನೆ. ಸುಮಾರು 4-5 ವರ್ಷಗಳ ಹಿಂದೆ ಮಹಿಳಾ ಪೊಲೀಸ್ ಠಾಣೆಯವರು ನನ್ನನ್ನು ಕರೆಯಿಸಿ ಅನಿಲ್ ಕುಮಾರ್ ಇವರ ಮದುವೆ ನಮ್ಮ ಫಂಕ್ಷನ್ ಹಾಲ್ ನಲ್ಲಿ ಆದ ಬಗ್ಗೆ ಯಾವ ದಿನಾಂಕದಂದು ಮದುವೆ ಆಗಿದೆ ಎಂದು ಮಾಹಿತಿ ಕೇಳಿದ್ದರು. ಆ ಬಗ್ಗೆ ಮಾಹಿತಿಯನ್ನು ಲೆಟರ್ ಪ್ಯಾಡ್ ನಲ್ಲಿ ಕೊಡುವಂತೆ ಕೇಳಿದ್ದರು. ಆ ಪ್ರಕಾರ ನಾನು ಮಾಹಿತಿಯನ್ನು ನೀಡಿರುತ್ತೇನೆ. ಸದರಿ ಮಾಹಿತಿಯನ್ನು ಈಗ ನೋಡುತ್ತಿದ್ದು ಅದನ್ನು ನಿಪಿ-**25** ಎಂದು ಅದರಲ್ಲಿಯ ಸಾಕ್ಷಿಯ ಸಹಿಯನ್ನು ನಿಪಿ-**25**(ಎ) ಎಂದು ಗುರುತಿಸಲಾಯಿತು. ನಿಪಿ-**25** ನನ್ನ ಕೈಬರಹದಲ್ಲಿ ಇರುತ್ತದೆ ಅದರ ಪ್ರಕಾರ ಅನಿಲ್ ಕುಮಾರ ಇವರ ದಿನಾಂಕ **12.03.2020** ರಂದು ಶ್ರಾವಂತಿ ಇವರ ಜೊತೆ ಆಗಿರುತ್ತದೆ.

<u>ಪಾಟೀಸವಾಲು ಆರೋಪಿ ಪರ ಶ್ರೀ ಎಮ್ . ಎ.ಬಿ. ವಕೀಲರಿಂದಃ</u>

ಶ್ರೀ ಎಸ್. ಎಸ್.ಬಿ. ವಕೀಲರು ಶ್ರೀ ಎಮ್.ಎ.ಬಿ ವಕೀಲರು ಕಣ್ಣಿನ ಶಸ್ತ ಶಿಕಿತ್ಸೆಗಾಗಿ ಆಸ್ಪತ್ರೆಯಲ್ಲಿ ದಾಖಲಾಗಿರುತ್ತಾರೆ. ಆದ್ದರಿಂದ ಸಮಯ ನೀಡುವಂತೆ ಕೋರಿದ್ದರಿಂದ ನ್ಯಾಯಾದಾನದ ದೃಷ್ಟಿಯಿಂದ ಸಮಯವನ್ನು ನೀಡಿ ಪಾಟೀ ಸವಾಲನ್ನು ಮುಂದೂಡಲಾಯಿತು.

ಮರು ವಿಚಾರಣೆ ಇಲ್ಲ.

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೆ. ಸರಿ ಇದೆ.

C/c, 2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬಳ್ಳಾರಿ.